# ಕರ್ನಾಟಕ ಲೋಕಾಯುಕ್ತ

**ಸಂ.ಕಂಪ್ಲೇಂಟ್/ಉಪಲೋಕ್/ಬಿಜಿಎಂ/35/2022**
**ಪಿ.ಓ.ಎ.ಆರ್.ಇ-06(ಮಂಡನಾಧಿಕಾರಿಗಳ ಶಾಖೆ).**

ಬಹುಮಹಡಿಗಳ ಕಟ್ಟಡ,
ಡಾ.ಬಿ.ಆರ್. ಅಂಬೇಡ್ಕರ ವೀದಿ,
ಬೆಂಗಳೂರು, ದಿನಾಂಕ: 28/11/2022.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ

**ವಿಷಯ: (1) ಶ್ರೀ. ಜೆಡ್.ಎಂ. ಚಿಂಚೋಳ್‌ಕರ್,** ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗ, ಸಹಾಯಕ ಕಾರ್ಯಪಾಲಕ ಅಭಿಯಂತರರು, (ಹೆಚ್ಚಿನ ಪ್ರಭಾರ) ಕಾರ್ಯಪಾಲಕ ಅಭಿಯಂತರರು, ಹಾಲಿ ಕರ್ತವ್ಯ: ಕಾರ್ಯಪಾಲಕ ಅಭಿಯಂತರರು, ಕೊಪ್ಪಳ ವಿಭಾಗ, ಕೊಪ್ಪಳ ಹಾಗೂ ಇತರೆ ಐವರು ಸರ್ಕಾರಿ ನೌಕರರುಗಳು ಸರ್ಕಾರಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ಕರ್ತವ್ಯಲೋಪ / ದುರ್ನಡತೆ ತೋರಿದ ಬಗ್ಗೆ.

****

ಪೊಲೀಸ್ ನಿರೀಕ್ಷಕರು, ಬೆಂಗಳೂರು ನಗರ ಕರ್ನಾಟಕ ಲೋಕಾಯುಕ್ತ ಪೊಲೀಸ್ ಬೆಂಗಳೂರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ **(1) ಶ್ರೀ. ಜೆಡ್.ಎಂ. ಚಿಂಚೋಳ್‌ಕರ್,** ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗ, ಸಹಾಯಕ ಕಾರ್ಯಪಾಲಕ ಅಭಿಯಂತರರು, (ಹೆಚ್ಚಿನ ಪ್ರಭಾರ) ಕಾರ್ಯಪಾಲಕ ಅಭಿಯಂತರರು, ಹಾಲಿ ಕರ್ತವ್ಯ: ಕಾರ್ಯಪಾಲಕ ಅಭಿಯಂತರರು, ಕೊಪ್ಪಳ ವಿಭಾಗ, ಕೊಪ್ಪಳ, **(2) ಶ್ರೀ. ಆರ್.ಎಫ್. ಹುಡೇದವರ್,** ಕೆ.ಆರ್.ಐ.ಡಿ.ಎಲ್. ಬೆಳಗಾವಿ ವಿಭಾಗ, ಕಾರ್ಯಪಾಲಕ ಅಭಿಯಂತರರು, ಹಾಲಿ ಕರ್ತವ್ಯ: ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್., ಕೇಂದ್ರ ಕಚೇರಿ, ಬೆಂಗಳೂರು(ಹಾಲಿ: ವಯೋನಿವೃತ್ತರು), **(3) ಶ್ರೀ. ಟಿ.ಹೆಚ್. ಗುರುಮೂರ್ತಿ,** ಕೆ.ಆರ್.ಐ.ಡಿ.ಎಲ್. ಬೆಳಗಾವಿ ವಿಭಾಗ, ಕಾರ್ಯಪಾಲಕ ಅಭಿಯಂತರರು (ಹಾಲಿ ವಯೋನಿವೃತ್ತರು), **(4) ಶ್ರೀ. ಎಂ.ಎಸ್. ತೀರ್ಥಲಿಂಗಪ್ಪ,** ಕೆ.ಆರ್.ಐ.ಡಿ.ಎಲ್. ಬೆಳಗಾವಿ ವಿಭಾಗ, ಕಾರ್ಯಪಾಲಕ ಅಭಿಯಂತರರು, ಹಾಲಿ ಕರ್ತವ್ಯ: ಅಧೀಕ್ಷಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್. ಬೆಂಗಳೂರು ವಲಯ, ಕೇಂದ್ರ ಕಚೇರಿ, ಬೆಂಗಳೂರು (ಹಾಲಿ: ವಯೋನಿವೃತ್ತರು), **(5) ಶ್ರೀ. ಎಲ್. ಧನ್ಯಕುಮಾರ್,** ಕೆ.ಆರ್.ಐ.ಡಿ.ಎಲ್. ಬೆಳಗಾವಿ ವಿಭಾಗ, ಕಾರ್ಯಪಾಲಕ ಅಭಿಯಂತರರು, ಹಾಲಿ ಕರ್ತವ್ಯ: ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್. ಕಲಬುರ್ಗಿ ವಿಭಾಗ-1 (ಹಾಲಿ: ವಯೋನಿವೃತ್ತರು) ಮತ್ತು **(6) ಶ್ರೀ.**

**ನೂರ್ ಅಹಮದ್,** ಕೆ.ಆರ್.ಐ.ಡಿ.ಎಲ್. ಬೆಳಗಾವಿ ವಿಭಾಗ, ಕಾರ್ಯಪಾಲಕ ಅಭಿಯಂತರರು, (ಹಾಲಿ ವಯೋನಿವೃತ್ತರು) (ಇನ್ನು ಮುಂದೆ ಕ್ರಮವಾಗಿ '1 ರಿಂದ 6ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ). **ಶ್ರೀ. ಸಿದ್ದಾರ್ಥ ಎಸ್. ಬಿನ್ ಕುಮಾರಸ್ವಾಮಿ,** ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆಆರ್ಐಡಿಎಲ್, ಮೈಸೂರು ಉಪವಿಭಾಗ, ಆಲನಹಳ್ಳಿ, ಮೈಸೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ). ಎದುರುದಾರರುಗಳು ಕಾಮಗಾರಿಗಳನ್ನು ನಿರ್ವಹಿಸುವ ಸಮಯದಲ್ಲಿ ಸಂಸ್ಥೆಯ ನಿಯಮಾವಳಿ ಕೆ.ಎಲ್.ಎ.ಸಿ. ಸ್ಟ್ಯಾಂಡಿಗ್ ಆರ್ಡರ್-1978ರ ನಿಯಮ 177, 41 ಮತ್ತು 42 ಹಾಗೂ ಕನಿಷ್ಠ ಕೂಲಿದಾರರ ಕಾಯ್ದೆ, 1948ರ ಉಲ್ಲಂಘನೆಮಾಡಿ ದುರ್ನಡತೆ / ಕರ್ತವ್ಯಲೋಪವೆಸಗಿರುತ್ತಾರೆಂದು ವರದಿ ಸಲ್ಲಿಸಿದ ಮೇರೆಗೆ ದಾಖಲಾತಿಗಳನ್ನು ಪರಿಶೀಲಿಸಿದಾಗ ಎದುರುದಾರರುಗಳು ಅವರ ಸೇವಾ ಅವಧಿಯಲ್ಲಿ ಕರ್ತವ್ಯಲೋಪ / ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿರುತ್ತದೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ :-**

i) ದೂರುದಾರರಾದ **ಶ್ರೀ. ಸಿದ್ದಾರ್ಥ ಎಸ್. ಬಿನ್ ಕುಮಾರಸ್ವಾಮಿ,** ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್. ಮೈಸೂರು ಉಪವಿಭಾಗ, ಆಲನಹಳ್ಳಿ, ಮೈಸೂರುರವರು ಕೆ.ಆರ್.ಐ.ಡಿ.ಎಲ್. ಸಂಸ್ಥೆಯಲ್ಲಿ ಕಾನೂನುಬಾಹಿರವಾಗಿ ಸುಳ್ಳು ನಗದು ವೋಚರ್‌ಗಳ ಮೂಲಕ ಕೋಟ್ಯಾಂತರ ರೂಪಾಯಿ ಹಣ ಪಾವತಿಸಲಾಗಿದೆ ಎನ್ನುವ ವಿಷಯ ಕುರಿತಂತೆ ದೂರು ನೀಡಿರುತ್ತಾರೆ. ಆ ದೂರಿನಲ್ಲಿ,-

(1) ಕೆ.ಆರ್.ಐ.ಡಿ.ಎಲ್. ಸಂಸ್ಥೆಯು ಕರ್ನಾಟಕ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿದ್ದು, ಅದರ ಕೇಂದ್ರ ಕಚೇರಿ ಬೆಂಗಳೂರಿನ ಆನಂದ ರಾವ್ ವೃತ್ತದಲ್ಲಿರುತ್ತದೆ. ಸದರಿ ಸಂಸ್ಥೆಯು ನಿರ್ಮಾಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದು, ಸರ್ಕಾರಿ ಮತ್ತು ಅರೆ-ಸರ್ಕಾರಿ ಸಂಸ್ಥೆಗಳು ವಹಿಸುವ ಕಾಮಗಾರಿಗಳನ್ನು ಇಲಾಖಾ ಪದ್ಧತಿಯಲ್ಲಿ ನಿರ್ವಹಿಸುತ್ತದೆ.

(2) ಸಂಸ್ಥೆಯ ನಿಯಮಾವಳಿ ಕೆ.ಎಲ್.ಎ.ಸಿ. ಸ್ಟ್ಯಾಂಡಿಂಗ್ ಆರ್ಡರ್ 1978ರ ನಿಯಮ 177ರ ಅನ್ವಯ ಕಾಮಗಾರಿಗಳಿಗೆ ಸಂಬಂಧಿಸಿದ

ಸಾಮಾಗ್ರಿ ಮತ್ತು ದಿನಗೂಲಿ ನೌಕರರ ಹಣ ಪಾವತಿಯನ್ನು ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು ಅವರಿಗೆ ಸಂಬಂಧಿಸಿದ ವ್ಯಕ್ತಿಗಳಿಗೆ ನೇರವಾಗಿ ಚೆಕ್ ಮೂಲಕ ಹಣ ಪಾವತಿ ಮಾಡಬೇಕಾಗಿರುತ್ತದೆ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಸಂಸ್ಥೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಅಕ್ರಮವಾಗಿ ತಮ್ಮ ಹಾಗೂ ಇತರ ಸಹಾಯಕ / ಕಿರಿಯ ಅಭಿಯಂತರರುಗಳ ಖಾಸಗಿ ಉಳಿತಾಯ ಖಾತೆಗೆ ಕಾಮಗಾರಿ ಹಣವನ್ನು ವರ್ಗಾಯಿಸಿಕೊಂಡು, ನಂತರ ಸದರಿ ಹಣವನ್ನು ನಗದು ರೂಪದಲ್ಲಿ ಕಾಲ್ಪನಿಕ ವ್ಯಕ್ತಿಗಳ ಹೆಸರಿನಲ್ಲಿ ಸುಳ್ಳು ನಗದು ವೋಚರ್‌ಗಳ ಮೂಲಕ ಹಣ ಪಾವತಿ ಮಾಡುವ ಪದ್ಧತಿಯನ್ನು ಅನುಸರಿಸಿರುತ್ತಾರೆ.

(3) ನಿಯಮ 41 ಮತ್ತು 42ರ ಅನುಸಾರ ಕೂಲಿ ಕಾರ್ಮಿಕರ ವಿವರಗಳು, ಅವರು ನಿರ್ವಹಿಸಿದ ಕೆಲಸದ ಅವಧಿ, ಪ್ರಮಾಣ ಇತ್ಯಾದಿಗಳ ಆಧಾರದಲ್ಲಿ ಹಣ ಪಾವತಿ ಮಾಡಬೇಕಾಗಿದ್ದು, ಸದರಿ ವಿವರಗಳನ್ನು ಸಂಬಂಧಿಸಿದ ಜಾಬ್‌ಕಾರ್ಡ್‌ನೊಂದಿಗೆ ನೀಡುವುದು ಕಡ್ಡಾಯವಾಗಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಸಂಸ್ಥೆಯಲ್ಲಿ ಯಾವುದೇ ದಾಖಲೆಗಳನ್ನು ನಿರ್ವಹಿಸದೆ, ನಗದು ರೂಪದಲ್ಲಿ ಹಣ ಪಾವತಿ ಮಾಡುವ ಪದ್ಧತಿ ಜಾರಿಯಲ್ಲಿದ್ದು, ಕನಿಷ್ಠ ಕೂಲಿದಾರ ಕಾಯ್ದೆ–1948ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ ಮತ್ತು ಸದರಿ ಕಾಯ್ದೆಯ ಕಲಂ 22(ಸಿ)ರನ್ವಯ ಶಿಕ್ಷಾರ್ಹ ಅಪರಾಧವಾಗಿರುತ್ತದೆ.

(4) ಈ ಪದ್ಧತಿ ಸಂಸ್ಥೆಯ ಎಲ್ಲಾ 74 ಉಪವಿಭಾಗಗಳಲ್ಲಿ ಜಾರಿಯಲ್ಲಿದ್ದು, ಸರಾಸರಿ ವಾರ್ಷಿಕ ರೂ.600 ಕೋಟಿಗೂ ಹೆಚ್ಚಿನ ಹಣವನ್ನು ಸುಳ್ಳು ನಗದು ವೋಚರ್‌ಗಳ ಮೂಲಕ ಪಾವತಿ ಮಾಡಲಾಗುತ್ತಿದೆ. 2011–12ನೇ ಸಾಲಿನಿಂದ ಈವರೆಗೂ ಸುಮಾರು ರೂ.2,500 ಕೋಟಿಗಳಷ್ಟು ಈ ರೀತಿಯಲ್ಲಿ ಸುಳ್ಳು ನಗದು ವೋಚರ್‌ಗಳ ಮೂಲಕ ಹಣ ಪಾವತಿ ಮಾಡಲಾಗಿದೆ. ಈ ರೀತಿ ಪಾವತಿಗೆ ಸಂಬಂಧಿಸಿದ ದಾಖಲೆಗಳು ಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಲಭ್ಯವಿದ್ದು, ವಿವರಗಳು ಸಂಸ್ಥೆ ನಿರ್ವಹಿಸುತ್ತಿರುವ **"ಟ್ಯಾಲಿ ಪ್ಯಾಕೇಜ್"** ನಲ್ಲಿ ನಮೂದಿಸಲಾಗಿರುತ್ತದೆ.

(5) ಉದಾಹರಣೆಯಾಗಿ ಸಂಸ್ಥೆಯ ಗೋಕಾಕ್ ಉಪವಿಭಾಗಕ್ಕೆ ಸಂಬಂಧಿಸಿದ ಕೆಲವು ದಾಖಲೆಗಳನ್ನು ದೂರಿನೊಂದಿಗೆ ನೀಡಿರುತ್ತಾರೆ. ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು **ಶ್ರೀ. ಜೆಡ್.ಎಂ. ಚಿಂಚೋಳ್‌ಕರ್**‌ರವರು ಅಕ್ರಮವಾಗಿ ಸಂಸ್ಥೆಯ ಖಾತೆಯಿಂದ ಅವರ ಸ್ವಂತ ಉಳಿತಾಯ ಖಾತೆಗೆ ವರ್ಗಾವಣೆ ಮಾಡಿಕೊಂಡಿರುವ ದಾಖಲೆಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ ಮತ್ತು ಮಾರ್ಚ್ 2013ರ ಮಾಹೆಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಗದು ರೂಪದಲ್ಲಿ ಹಣ

ಪಾವತಿ ಮಾಡಿ ಸಂಸ್ಥೆಯ ಕೇಂದ್ರ ಕಚೇರಿಗೆ ಸಲ್ಲಿಸಿದ ಕೆಲವು ನಗದು ವೋಚರ್ ಮತ್ತು ಜಾಬ್ ಬಿಲ್ಲುಗಳನ್ನು ಅನುಬಂಧ–2ರಲ್ಲಿ ನೀಡಿರುತ್ತಾರೆ.

ಮೇಲೆ ವಿವರಿಸಿದ ಅಕ್ರಮ ಎಸಗಿರುವ **ಶ್ರೀ. ಜೆಡ್.ಎಂ. ಚಿಂಚೋಳ್‌ಕರ್,** ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಇತರರು ಸಲ್ಲಿಸಿದ ನಗದು ವೋಚರ್‌ಗಳನ್ನು ಮಾನ್ಯ ಮಾಡಿರುವ ಸಂಬಂಧಿಸಿದ ಸಂಸ್ಥೆಯ ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ದೂರುದಾರರು ದಿ: 01/06/2015 ರಂದು ಪೋಲೀಸ್ ನಿರೀಕ್ಷಕರು, ಬೆಂಗಳೂರು ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರುರವರಿಗೆ ದೂರನ್ನು ಸಲ್ಲಿಸಿರುತ್ತಾರೆ. ಸದರಿ ಠಾಣೆಯ ಠಾಣಾಧಿಕಾರಿಗಳು ಅವರ ಠಾಣೆಯ ಗುನ್ನಾ ಸಂಖ್ಯೆ:33/2015, ಕಲಂ 13(1)(ಸಿ) ಮತ್ತು (ಡಿ) ಸಹಿತ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರಡಿಯಲ್ಲಿ ಎದುರುದಾರರುಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

ii) ದಿ: 08/03/2017 ರಂದು ತನಿಖಾಧಿಕಾರಿಯವರು ಪಂಚಸಾಕ್ಷಿದಾರರುಗಳಾದ (1) ಶ್ರೀ. ಬಸಲಿಂಗಪ್ಪ ಎಸ್. ದಾನಿಹಾಳ, ಪ್ರಥಮ ದರ್ಜೆ ಸಹಾಯಕರು, ತಹಶೀಲ್ದಾರ್‌ರವರ ಕಾರ್ಯಾಲಯ, ಗೋಕಾಕ, ಬೆಳಗಾವಿ ಮತ್ತು (2) ಶ್ರೀ. ಶಿವಾಜಿ ರಾಮು ಜಾಧವ, ದ್ವಿತೀಯ ದರ್ಜೆ ಸಹಾಯಕರು, ತಹಶೀಲ್ದಾರ್‌ರವರ ಕಾರ್ಯಾಲಯ, ಗೋಕಾಕ, ಬೆಳಗಾವಿ ಇವರುಗಳನ್ನು ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗ ಕಚೇರಿಗೆ ಕರೆಯಿಸಿಕೊಂಡು ಅವರಿಗೆ ದೂರುದಾರರು ನೀಡಿದ ದೂರಿನ ಸಂಕ್ಷಿಪ್ತ ಮಾಹಿತಿಯನ್ನು ತಿಳಿಸಿ, ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೆಲವು ದಾಖಲಾತಿಗಳನ್ನು ಈ ಕಛೇರಿಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆಂದು ತಿಳಿಸಿ, ಅದಕ್ಕೆ ಪಂಚಸಾಕ್ಷಿದಾರರಾಗಿ ಸಹಕರಿಸಲು ತನಿಖಾಧಿಕಾರಿಯವರು ಕೋರಿಕೊಂಡಾಗ ಅವರು ಒಪ್ಪಿರುತ್ತಾರೆ. ನಂತರ ತನಿಖಾಧಿಕಾರಿಯವರು ಕಛೇರಿಯಲ್ಲಿ ಹಾಜರಿದ್ದ 1ನೇ ಎದುರುದಾರರಿಗೆ ಗುರುತಿನ ಚೀಟಿಯನ್ನು ತೋರಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿ, ದೂರಿನ ಪ್ರಕರಣಕ್ಕೆ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಹಾಜರುಪಡಿಸುವಂತೆ ತಿಳಿಸಿದಾಗ, 1ನೇ ಎದುರುದಾರರು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ.

(1) ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗಕ್ಕೆ ಸಂಬಂಧಪಟ್ಟಂತೆ 2011ನೇ ಇಸವಿಯ ಏಪ್ರಿಲ್ ತಿಂಗಳಿನಿಂದ ಡಿಸೆಂಬರ್ ತಿಂಗಳವರೆಗಿನ ಕಾಮಗಾರಿಗಳಿಗೆ ಸಂಬಂಧಿಸಿದ ದಾಖಲೆಗಳು.

ಸಂ.ಕಂಪ್ಲೇಂಟ್/ಉಪಲೋಕ್/ಬಿಜಿಎಂ/35/2022
ಪಿ.ಓ.ಎ.ಆರ್.ಇ–06

(2) ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗಕ್ಕೆ ಸಂಬಂಧಪಟ್ಟಂತೆ 2012ನೇ ಇಸವಿಯ ಜನವರಿ ತಿಂಗಳಿನಿಂದ ಡಿಸೆಂಬರ್ ತಿಂಗಳವರೆಗಿನ ಕಾಮಗಾರಿಗಳಿಗೆ ಸಂಬಂಧಿಸಿದ ದಾಖಲೆಗಳು.

(3) ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗಕ್ಕೆ ಸಂಬಂಧಪಟ್ಟಂತೆ 2013ನೇ ಇಸವಿಯ ಜನವರಿ ತಿಂಗಳಿನಿಂದ ಡಿಸೆಂಬರ್ ತಿಂಗಳವರೆಗಿನ ಕಾಮಗಾರಿಗಳಿಗೆ ಸಂಬಂಧಿಸಿದ ದಾಖಲೆಗಳು.

(4) ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗಕ್ಕೆ ಸಂಬಂಧಪಟ್ಟಂತೆ 2014ನೇ ಇಸವಿಯ ಜನವರಿ ತಿಂಗಳಿನಿಂದ ಮಾರ್ಚ್ ತಿಂಗಳವರೆಗಿನ ಕಾಮಗಾರಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು 1ನೇ ಎದುರುದಾರರು ಹಾಜರುಪಡಿಸಿರುತ್ತಾರೆ.

ಆ ದಾಖಲೆಗಳ ಮೂಲ ದಾಖಲಾತಿಗಳನ್ನು ತನಿಖಾಧಿಕಾರಿಯವರು 1 ನೇ ಎದುರುದಾರರಿಂದ ವಶಕ್ಕೆ ಪಡೆದು ಆ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಅವರಿಗೆ ನೀಡುವುದಾಗಿ ತಿಳಿಸಿರುತ್ತಾರೆ. ದಾಖಲೆಗಳನ್ನು ಪಡೆದ ಬಗ್ಗೆ ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ. ದಿ: 08/03/2017 ರಂದು ಸಂಜೆಯಾದ್ದರಿಂದ ಮುಂದಿನ ಪ್ರಕ್ರಿಯೆಯನ್ನು ದಿ: 09/03/2017ಕ್ಕೆ ಮುಂದೂಡಿರುತ್ತಾರೆ.

ದಿ: 09/03/2017 ರಂದು ತನಿಖಾಧಿಕಾರಿಯವರು, ಪಂಚಸಾಕ್ಷಿದಾರರು ಹಾಗೂ ತನಿಖಾ ತಂಡದೊಂದಿಗೆ ಬೆಳಿಗ್ಗೆ 10 ಗಂಟೆಗೆ ಕೆ.ಆರ್.ಐ.ಡಿ.ಎಲ್. ಗೋಕಾಕ ಉಪವಿಭಾಗ ಕಚೇರಿಯಲ್ಲಿ ಹಾಜರಿರುತ್ತಾರೆ. ತನಿಖಾಧಿಕಾರಿಯವರು ಪಂಚರ ಸಮಕ್ಷಮ ಪ್ರಕ್ರಿಯೆಯನ್ನು ಮುಂದುವರಿಸಿದ್ದು, 1ನೇ ಎದುರುದಾರರಿಗೆ ಉಳಿದ ದಾಖಲೆಗಳನ್ನು ಹಾಜರುಪಡಿಸುವಂತೆ ತಿಳಿಸಿದಾಗ, ಅವರು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ:–

(1) ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗಕ್ಕೆ ಸಂಬಂಧಪಟ್ಟಂತೆ 2014ನೇ ಇಸವಿಯ ಏಪ್ರಿಲ್ ತಿಂಗಳಿನಿಂದ ಡಿಸೆಂಬರ್ ತಿಂಗಳವರೆಗಿನ ಕಾಮಗಾರಿಗಳಿಗೆ ಸಂಬಂಧಿಸಿದ ದಾಖಲೆಗಳು.

(2) ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗಕ್ಕೆ ಸಂಬಂಧಪಟ್ಟಂತೆ 2015ನೇ ಇಸವಿಯ ಜನವರಿ ತಿಂಗಳಿನಿಂದ ಮಾರ್ಚ್ ತಿಂಗಳವರೆಗಿನ ಕಾಮಗಾರಿಗಳಿಗೆ ಸಂಬಂಧಿಸಿದ ಮೂಲ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

ಆ ದಾಖಲೆಗಳನ್ನು ವಶಕ್ಕೆ ಪಡೆದು ಅದರ ಜೆರಾಕ್ಸ್ ಪ್ರತಿಗಳನ್ನು 1ನೇ ಎದುರುದಾರರಿಗೆ ನೀಡುವುದಾಗಿ ತಿಳಿಸಿ ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ. ಆಗ ಸಮಯ ಸಂಜೆ 6.00 ಗಂಟೆಯಾದ್ದರಿಂದ ಮುಂದುವರೆದ ಪಂಚನಾಮೆಯ ಪ್ರಕ್ರಿಯೆಯನ್ನು ದಿ: 10/03/2017ಕ್ಕೆ ಮುಂದೂಡಿರುತ್ತಾರೆ.

ದಿನಾಂಕ 10/03/2017 ರಂದು ಬೆಳಿಗ್ಗೆ 10.00 ಗಂಟೆಗೆ ತನಿಖಾಧಿಕಾರಿಯವರು ತನಿಖಾತಂಡದೊಂದಿಗೆ ಮತ್ತು ಪಂಚರೊಂದಿಗೆ 1ನೇ ಎದುರುದಾರರ ಕಚೇರಿಯಾದ ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗದಲ್ಲಿ ಹಾಜರಿರುತ್ತಾರೆ. ತನಿಖಾಧಿಕಾರಿಯವರು ಎಲ್ಲರ ಸಮಕ್ಷಮ ಪಂಚನಾಮೆ ಪ್ರಕ್ರಿಯೆಯನ್ನು ಮುಂದುವರಿಸಿದ್ದು, ತನಿಖಾಧಿಕಾರಿಯವರು 1ನೇ ಎದುರುದಾರರಿಗೆ ಇತರೆ ದಾಖಲೆಗಳನ್ನು ಹಾಜರುಪಡಿಸುವಂತೆ ತಿಳಿಸಿದಾಗ, 1ನೇ ಎದುರುದಾರರು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ:-

(1) ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗಕ್ಕೆ ಸಂಬಂಧಪಟ್ಟಂತೆ 2015ನೇ ಇಸವಿಯ ಮೇ ತಿಂಗಳ ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳು ಹಾಗೂ 2011ನೇ ಇಸವಿ ಏಪ್ರಿಲ್ ತಿಂಗಳಿನಿಂದ 2012ನೇ ಇಸವಿ ಮಾರ್ಚ್ ತಿಂಗಳವರೆಗಿನ ಜನರಲ್ ವೋಚರ್ಸ್ ಮತ್ತು ಜೆ.ಇ. ಸ್ಟೇಟ್‌ಮೆಂಟ್‌ಗಳು (ವರ್ಕ್ ಬಿಲ್ ಅಬ್‌ಸ್ಟ್ರಾಕ್ಟ್).

(2) ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗದ ಕಾಮಗಾರಿಗೆ ಸಂಬಂಧಪಟ್ಟಂತೆ 2012ನೇ ಇಸವಿ ಏಪ್ರಿಲ್ ತಿಂಗಳಿನಿಂದ 2013ನೇ ಇಸವಿ ಮಾರ್ಚ್ ತಿಂಗಳವರೆಗಿನ ಜನರಲ್ ವೋಚರ್ಸ್ ಮತ್ತು ಜೆ.ಇ. ಸ್ಟೇಟ್‌ಮೆಂಟ್‌ಗಳು (ವರ್ಕ್ ಬಿಲ್ ಅಬ್‌ಸ್ಟ್ರಾಕ್ಟ್).

(3) ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗದ ಕಾಮಗಾರಿಗೆ ಸಂಬಂಧಪಟ್ಟಂತೆ 2013ನೇ ಇಸವಿ ಏಪ್ರಿಲ್ ತಿಂಗಳಿನಿಂದ 2014ನೇ ಇಸವಿ ಮಾರ್ಚ್ ತಿಂಗಳವರೆಗಿನ ಜನರಲ್ ವೋಚರ್ಸ್ ಮತ್ತು ಜೆ.ಇ. ಸ್ಟೇಟ್‌ಮೆಂಟ್‌ಗಳು (ವರ್ಕ್ ಬಿಲ್ ಅಬ್‌ಸ್ಟ್ರಾಕ್ಟ್).

(4) ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗದ ಕಾಮಗಾರಿಗೆ ಸಂಬಂಧಪಟ್ಟಂತೆ 2014ನೇ ಇಸವಿ ಏಪ್ರಿಲ್ ತಿಂಗಳಿನಿಂದ 2015ನೇ ಇಸವಿ ಮೇ ತಿಂಗಳವರೆಗಿನ ಜನರಲ್ ವೋಚರ್ಸ್ ಮತ್ತು ಜೆ.ಇ. ಸ್ಟೇಟ್‌ಮೆಂಟ್‌ಗಳು (ವರ್ಕ್ ಬಿಲ್ ಅಬ್‌ಸ್ಟ್ರಾಕ್ಟ್).

ಮೇಲ್ಕಂಡ ಮೂಲ ದಾಖಲೆಗಳನ್ನು ಪಡೆದು (ಆ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು 1ನೇ ಎದುರುದಾರರಿಗೆ ನೀಡುವುದಾಗಿ ತಿಳಿಸಿ) ದಾಖಲೆಗಳನ್ನು ವಶಪಡಿಸಿಕೊಂಡ ಬಗ್ಗೆ ವಿವರವಾದ ಪಂಚನಾಮೆಯನ್ನು ತನಿಖಾಧಿಕಾರಿಯವರು ನಿರ್ವಹಿಸಿರುತ್ತಾರೆ. ತದನಂತರ, ತನಿಖಾಧಿಕಾರಿಯವರು ಸದರಿ ದಾಖಲೆಗಳಿಗೆ ಸಂಬಂಧಪಟ್ಟಂತೆ ಸಾಕ್ಷಿದಾರರ ಹೇಳಿಕೆಗಳನ್ನು ಮತ್ತು ದಾಖಲೆಗಳ ಬಗ್ಗೆ ಎದುರುದಾರರುಗಳಿಂದ ಸಮಜಾಯಿಷಿಯನ್ನು ಪಡೆದುಕೊಂಡಿರುತ್ತಾರೆ. ಅಲ್ಲದೆ, ತನಿಖಾಧಿಕಾರಿಯವರು ಎದುರುದಾರರುಗಳ ಸಕ್ಷಮ ಪ್ರಾಧಿಕಾರದಿಂದ ಕರ್ತವ್ಯ ಹಾಗೂ ಕಾರ್ಯವ್ಯಾಪ್ತಿಯ ಬಗ್ಗೆ ದಾಖಲೆಗಳನ್ನು ಪಡೆದುಕೊಂಡಿರುತ್ತಾರೆ.

ತನಿಖಾಧಿಕಾರಿಯವರು ತನಿಖೆಯ ಸಮಯದಲ್ಲಿ ಪಡೆದುಕೊಂಡ ದಾಖಲೆಗಳಿಂದ 1ನೇ ಎದುರುದಾರರು ದಿ: 01/04/2011 ರಿಂದ 31/05/2015 ರವರೆಗೆ ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ನಿರ್ದೇಶಕರ ಹುದ್ದೆಯಲ್ಲಿ ಕೆಲಸ ನಿರ್ವಹಿಸಿರುತ್ತಾರೆ. ದಿ: 28/06/2012 ರಿಂದ 29/01/2013 ರವರೆಗೆ ಗೋಕಾಕ್ ಉಪವಿಭಾಗದ ಕಾರ್ಯಪಾಲಕ ಅಭಿಯಂತರರು / ಉಪನಿರ್ದೇಶಕರ ಹುದ್ದೆಯ ಹೆಚ್ಚುವರಿ ಪ್ರಭಾರವನ್ನು ಸಹ ನಿರ್ವಹಿಸುತ್ತಾರೆ. 1ನೇ ಎದುರುದಾರರು 2011ರ ಏಪ್ರಿಲ್‌ನಿಂದ ಮೇ 2015ರ ಅವಧಿಯಲ್ಲಿ ಗೋಕಾಕ್ ಉಪವಿಭಾಗದಲ್ಲಿ ಎ.ಇ.ಇ. ಆಗಿ ಕೆ.ಆರ್.ಐ.ಡಿ.ಎಲ್.ನ ವಿವಿಧ ಕಾಮಗಾರಿಗಳ ಸಂಬಂಧ ಬಿಡುಗಡೆಯಾದ ಕಾಮಗಾರಿ ಮುಂಗಡ ಹಣ ಒಟ್ಟು 8,67,07,688/– ರೂ.ಗಳು ಗೋಕಾಕ್ ಉಪವಿಭಾಗದ "THE AD KRIDL BHUSIRI GOKAK BELGAM ZONE" ಹೆಸರಿನಲ್ಲಿರುವ ಅಧಿಕೃತ ಕಾಮಗಾರಿ ಚಾಲ್ತಿ ಖಾತೆಗಳಾದ (1) ಸಿಬಿಸಿಎ/01/000245 ಮತ್ತು (2) ಸಿಬಿಸಿಎ/01/000553 ಗಳಲ್ಲಿ ಬಿಡುಗಡೆಯಾಗಿರುತ್ತದೆ. ಮೇಲ್ಕಂಡ ಅವಧಿಯಲ್ಲಿ ಗೋಕಾಕ್ ಉಪವಿಭಾಗದ ಕಾಮಗಾರಿ ಚಾಲ್ತಿ ಖಾತೆಗಳಿಂದ ಮುಂಗಡ ಹಣವನ್ನು 1ನೇ ಎದುರುದಾರರು ಕಾರ್ಪೋರೇಷನ್ ಬ್ಯಾಂಕ್ ಗೋಕಾಕ್ ಶಾಖೆಯಲ್ಲಿ ಹೊಂದಿದ್ದ ಅವರ ವೈಯುಕ್ತಿಕ ಉಳಿತಾಯ ಖಾತೆ ಸಂ.01/010306ಗೆ ಅನಧಿಕೃತವಾಗಿ ವರ್ಗಾವಣೆ ಮಾಡಿಕೊಂಡು, ಕೆ.ಎಲ್.ಎ.ಸಿ. / ಕೆ.ಆರ್.ಐ.ಡಿ.ಎಲ್. ನಿಯಮಗಳನ್ನು ಉಲ್ಲಂಘಿಸಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ.

1) ಜಾಬ್ ಬಿಲ್‌ನಲ್ಲಿ ಗ್ರೂಪ್ ಲೀಡರ್‌ರವರ ಪೂರ್ಣ ವಿಳಾಸ, ಕೂಲಿ ಕಾರ್ಮಿಕರು ನಿರ್ವಹಿಸಿದ ಕೆಲಸದ ಅವಧಿ ಇತ್ಯಾದಿ ವಿವರಗಳನ್ನು

ಒಳಗೊಂಡ ನಾಮಿನಲ್ ರೋಲ್ ನಿರ್ವಹಿಸಿರುವುದಿಲ್ಲ ಹಾಗೂ ನಾಮಿನಲ್ ರೋಲ್‌ನ್ನು ಬಿಲ್‌ನೊಂದಿಗೆ ಲಗತ್ತಿಸದೇ, ಕೆ.ಆರ್.ಐ.ಡಿ.ಎಲ್. ನಿಯಮ 41 ಮತ್ತು 42 ನ್ನು ಉಲ್ಲಂಘಿಸಿರುವುದು ಕಂಡುಬಂದಿರುತ್ತದೆ.

2) ಕೆ.ಆರ್.ಐ.ಡಿ.ಎಲ್. / ಕೆ.ಎಲ್.ಎ.ಸಿ. ನಿಯಮ 177ರ ಅನ್ವಯ ರೂ. 2,500/- ಕ್ಕೂ ಮೇಲ್ಪಟ್ಟ ಮೊತ್ತವನ್ನು ಸಂಬಂಧಪಟ್ಟ ಗ್ರೂಪ್ ಲೀಡರ್ / ಸರಕು ಪೂರೈಕೆದಾರರ ಹೆಸರಿಗೆ ನೇರವಾಗಿ ಕ್ರಾಸ್ಡ್ ಚೆಕ್ ಮುಖೇನ ನೀಡಬೇಕೆಂಬ ನಿಯಮವಿರುತ್ತದೆ. ಅಲ್ಲದೆ, ಕೆ.ಆರ್.ಐ.ಡಿ.ಎಲ್. / ಕೆ.ಎಲ್.ಎ.ಸಿ. ಸುತ್ತೋಲೆ ಸಂ.: ಕಭೂಸೇನಾ / ವರ್ಕ್ಸ್ / ಸಿಐಆರ್ / 2001-03/88, ದಿ: 09/10/2002ರಲ್ಲಿ ಸಹ ಕೂಲಿ ಮತ್ತು ಸಾಮಾಗ್ರಿಗಳ ಮೊತ್ತವನ್ನು ಪ್ರತ್ಯೇಕವಾಗಿ ಗ್ರೂಪ್ ಲೀಡರ್‌ಗೆ ಕ್ರಾಸ್ಡ್ ಚೆಕ್ ಮೂಲಕ ಸಂದಾಯ ಮಾಡಬೇಕೆಂದು ಆದೇಶವಿದ್ದರೂ ಸಹ 1ನೇ ಎದುರುದಾರರು ಮೇಲ್ಕಂಡ ಅವಧಿಯಲ್ಲಿ ಕಾಮಗಾರಿ ಮುಂಗಡ ಹಣದ ಶೇಕಡ 93 ರಷ್ಟು ನಗದಾಗಿ ಪಾವತಿಮಾಡಿ ಕೆ.ಎಲ್.ಎ.ಸಿ. ನಿಯಮ 177 ಮತ್ತು ಸುತ್ತೋಲೆಯ ಆದೇಶವನ್ನು ಉಲ್ಲಂಘಿಸಿರುವುದಾಗಿ ಕಂಡುಬಂದಿರುತ್ತದೆ.

3) 1ನೇ ಎದುರುದಾರರು ಏಪ್ರಿಲ್ 2011 ರಿಂದ ಮೇ 2015 ರವರೆಗೆ ಸಲ್ಲಿಸಿರುವ ಲೆಕ್ಕಪತ್ರಗಳಲ್ಲಿ ಹೆಚ್ಚಿನ ಲೆಕ್ಕಪತ್ರಗಳಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರ ಮತ್ತು ಕಾರ್ಯಪಾಲಕ ಅಭಿಯಂತರರ ಸಹಿ ಇರುವುದಿಲ್ಲ. ಜಾಬ್ ಬಿಲ್ ನಲ್ಲಿ ಗ್ರೂಪ್ ಲೀಡರ್ ಮತ್ತು ಕ್ಯಾಷ್ ರಶೀದಿಯಲ್ಲಿ ಪಾರ್ಟಿಗಳ ಸಹಿ ಇರುವುದಿಲ್ಲ.

4) ತನಿಖಾಧಿಕಾರಿಯವರು ದಿ:08/03/2017 ರಂದು ಗೋಕಾಕ್ ಉಪವಿಭಾಗದ ಕಚೇರಿಯಲ್ಲಿ ಮಹಜರ್ ಮೂಲಕ 1ನೇ ಎದುರುದಾರರು ಹಾಜರುಪಡಿಸಿದ ಏಪ್ರಿಲ್-2011 ರಿಂದ ಮೇ-2015 ರವರೆಗೆ ನಿರ್ವಹಿಸಿರುವ ಕಾಮಗಾರಿ ಸಂಬಂಧ ಸಲ್ಲಿಸಿರುವ ಮೂಲ ಲೆಕ್ಕಪತ್ರಗಳನ್ನು ಮತ್ತು ಇತರೆ ದಾಖಲೆಗಳನ್ನು ವಶಪಡಿಸಿಕೊಂಡಿದ್ದು, ಆ ದಾಖಲೆಗಳನ್ನು ಪರಿಶೀಲಿಸಿದಾಗ ಅವುಗಳ ಪೈಕಿ (1) ಸೆಪ್ಟಂಬರ್-2014ರ ಲೆಕ್ಕಪತ್ರ ದಾಖಲಾತಿ ಪುಟ ಸಂ: 1872 ರಿಂದ 1883 ರವರೆಗೆ (2) ಅಕ್ಟೋಬರ್-2014ರ ಲೆಕ್ಕಪತ್ರ ದಾಖಲಾತಿ ಪುಟ ಸಂ.: 1980 ರಿಂದ 1991 ರವರೆಗೆ, ದಾಖಲಾತಿ ಸಂ.:2002 ರಿಂದ 2008 ರವರೆಗೆ ಮತ್ತು ದಾಖಲಾತಿ

ಸಂ.: 2035 ರಿಂದ 2044 ರವರೆಗಿನ ಲೆಕ್ಕಪತ್ರದಲ್ಲಿ ಗ್ರೂಪ್ ಲೀಡರ್ ಹೆಸರು ಬರೆಯುವ ಸ್ಥಳದಲ್ಲಿ ಆಶಿಶ್ ನೆಹ್ರಾ, ಯುವರಾಜ್, ಜಹೀರ್ ಖಾನ್, ಯೂಸಫ್, ರಾಹುಲ್, ಗೌತಮ್, ಶಕ್ತಿ ಕಪೂರ್, ಅಭಿಷೇಕ್ ಬಚ್ಚನ್, ವಿರಾಟ್ ಕೊಹ್ಲಿ ಇತ್ಯಾದಿ ಹೆಸರುಗಳನ್ನು ನಮೂದಿಸಿರುತ್ತಾರೆ. ಆದರೆ, ವಿಳಾಸ ನಮೂದಿಸದೆ, ಜಾಬ್ ಬಿಲ್ ಮೊತ್ತವನ್ನು ಚೆಕ್ ಮುಖೇನ ನೀಡದೆ, ಜಾಬ್ ಬಿಲ್‌ನೊಂದಿಗೆ ನಾಮಿನಲ್ ರೋಲ್ ಲಗತ್ತಿಸಿರುವುದಿಲ್ಲ. ಅಲ್ಲದೆ, 1ನೇ ಎದುರುದಾರರು ಸದರಿ ಹೆಸರಿನ ಗ್ರೂಪ್ ಲೀಡರ್‌ಗಳ ಪೂರ್ಣ ವಿಳಾಸ ನೀಡಲು ತನಿಖಾಧಿಕಾರಿಯವರು ಕೇಳಿದಾಗಲೂ ಹಾಜರುಪಡಿಸಿರುವುದಿಲ್ಲ. ಅಲ್ಲದೆ, ಅವರುಗಳನ್ನು ವಿಚಾರಣೆಗೆ ಹಾಜರುಪಡಿಸಲು ತಿಳಿಸಿದಾಗಲೂ ಸಹ ಹಾಜರುಪಡಿಸಿರುವುದಿಲ್ಲ. 1ನೇ ಎದುರುದಾರರು ಕಾಲ್ಪನಿಕ ಹೆಸರಿನಲ್ಲಿ ಸುಳ್ಳು ಲೆಕ್ಕಪತ್ರಗಳನ್ನು ಸಲ್ಲಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

1ನೇ ಎದುರುದಾರರು ಎಲ್ಲಾ ನಿಯಮಗಳನ್ನು ಉಲ್ಲಂಘಿಸಿ, ಕಾಲ್ಪನಿಕ ಹೆಸರಿನಲ್ಲಿ ಸುಳ್ಳು ಲೆಕ್ಕಪತ್ರಗಳನ್ನು ಸಲ್ಲಿಸಿ, ಸದರಿ 5 ವರ್ಷಗಳ ಅವಧಿಯಲ್ಲಿ ಗೋಕಾಕ್ ಉಪವಿಭಾಗದ ಕಾಮಗಾರಿ ಚಾಲ್ತಿ ಖಾತೆಯಿಂದ 1ನೇ ಎದುರುದಾರರ ವೈಯುಕ್ತಿಕ ಉಳಿತಾಯ ಖಾತೆ ಸಂ.01/010306ಗೆ ಅನಧಿಕೃತವಾಗಿ ವರ್ಗಾವಣೆ ಮಾಡಿಕೊಂಡು, ಕಾಮಗಾರಿ ಮುಂಗಡ ಹಣದ ಶೇಕಡ 93 ರಷ್ಟು ನಗದಾಗಿ ಪಾವತಿಸಿ, ಸದರಿ 5 ವರ್ಷಗಳಲ್ಲಿ ಮಾಸಿಕವಾರು 1ನೇ ಎದುರುದಾರರ ಹೆಸರಿಗೆ ಬಿಡುಗಡೆಯಾದ ಮುಂಗಡ ಹಣಕ್ಕೆ ತಾಳೆಯಾಗುವಂತಹ ಲೆಕ್ಕಪತ್ರಗಳನ್ನು ಸಲ್ಲಿಸಿರುತ್ತಾರೆ. ಪ್ರತಿ ಮಾಹೆಯ ಜನರಲ್ ವೋಚರ್‌ನಲ್ಲಿ ಕ್ಲೋಸಿಂಗ್ ಬ್ಯಾಲೆನ್ಸ್ ನಿಲ್ ಎಂದು ನಮೂದಿಸಿರುತ್ತಾರೆ. ಆದರೆ 1ನೇ ಎದುರುದಾರರ ಉಳಿತಾಯ ಖಾತೆ ಸಂ.01/010306 ರಲ್ಲಿ ಲೆಕ್ಕಪತ್ರಕ್ಕೆ ವ್ಯತಿರಿಕ್ತವಾಗಿ ಕೆಲ ಮಾಹೆಯಲ್ಲಿ ವೈಯಕ್ತಿಕ ಉಳಿತಾಯ ಮೊತ್ತಕ್ಕಿಂತ ಹೆಚ್ಚಿನ ಬಾಕಿ ಮೊತ್ತವನ್ನು ಉಳಿಸಿಕೊಂಡಿರುತ್ತಾರೆ. ಉಳಿಸಿಕೊಂಡ ಹೆಚ್ಚುವರಿ ಹಣದ ಒಟ್ಟು ಮೊತ್ತ 1,02,68,365/- ರೂ.ಗಳ ಹಣ ದುರುಪಯೋಗ ಪಡಿಸಿಕೊಂಡಿರುವುದು ಕಂಡುಬಂದಿರುತ್ತದೆ. ಆ ಬಗ್ಗೆ 1ನೇ ಎದುರುದಾರರು ಯಾವುದೇ ವಿವರಣೆ ಅಥವಾ ಲೆಕ್ಕವನ್ನು ಹಾಗೂ ಸಕಾರಣವನ್ನು ನೀಡಿರುವುದಿಲ್ಲ.

2 ರಿಂದ 6ನೇ ಎದುರುದಾರರುಗಳು 1ನೇ ಎದುರುದಾರರು ಗೋಕಾಕ್ ಉಪವಿಭಾಗದಲ್ಲಿ ಎ.ಇ.ಇ. ಆಗಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಗೋಕಾಕ್ ವಿಭಾಗ ಕಚೇರಿಯಲ್ಲಿ ಕಾರ್ಯಪಾಲಕ ಅಭಿಯಂತರರು / ಉಪನಿರ್ದೇಶಕರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. 2 ರಿಂದ 6ನೇ ಎದುರುದಾರರುಗಳು 1ನೇ

ಎದುರುದಾರರು ಸಲ್ಲಿಸಿರುವ ಲೆಕ್ಕಪತ್ರಗಳ ಸೂಕ್ತ ಪರಿಶೀಲನೆ ಮಾಡದೆ ಜಾಬ್ ಬಿಲ್ ನಲ್ಲಿ ಗ್ರೂಪ್ ಲೀಡರ್ ಮತ್ತು ಕ್ಯಾಷ್ ರಶೀದಿಯಲ್ಲಿ ಪಾರ್ಟಿಯವರ ಸಹಿ ಇರದ ಲೆಕ್ಕಪತ್ರಗಳನ್ನು ಅನುಮೋದನೆ ಮಾಡಿರುತ್ತಾರೆ. ಸದರಿ ಲೆಕ್ಕಪತ್ರಗಳ ಮೊತ್ತದ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಎದುರುದಾರರ ಹೆಸರು. | ಗ್ರೂಪ್ ಲೀಡರ್ ಮತ್ತು ಕ್ಯಾಷ್ ರಶೀದಿಯಲ್ಲಿ ಪಾರ್ಟಿಯವರ ಸಹಿ ಇರದ ಲೆಕ್ಕಪತ್ರಗಳ ಒಟ್ಟು ಸಂಖ್ಯೆ. | ಸದರಿ ಲೆಕ್ಕಪತ್ರಗಳ ಒಟ್ಟು ಮೊತ್ತ ರೂ.ಗಳಲ್ಲಿ. |
|---|---|---|---|
| 1ನೇ ಎದುರುದಾರರು | ಶ್ರೀ. ಜೆಡ್.ಎಂ. ಚಿಂಚೋಳ್ಕರ್ | 93 | 39,01,579.00 |
| 2ನೇ ಎದುರುದಾರರು | ಶ್ರೀ. ಆರ್.ಎಫ್.ಹುಡೇದವರ್ | 6 | 63,590.00 |
| 3ನೇ ಎದುರುದಾರರು | ಶ್ರೀ. ಟಿ.ಹೆಚ್. ಗುರುಮೂರ್ತಿ | 16 | 11,32,621.00 |
| 4ನೇ ಎದುರುದಾರರು | ಶ್ರೀ. ಎಂ.ಎಸ್. ತೀರ್ಥಲಿಂಗಪ್ಪ | 23 | 9,06,830.00 |
| 5ನೇ ಎದುರುದಾರರು | ಶ್ರೀ. ಎಲ್. ಧನ್ಯಕುಮಾರ್ | 95 | 49,43,900.00 |
| 6ನೇ ಎದುರುದಾರರು | ಶ್ರೀ. ನೂರ್ ಅಹಮದ್ | 223 | 39,90,495.00 |
| | | ಒಟ್ಟು ಮೊತ್ತ ರೂ. | 1,49,39,024.00 |

ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗದಲ್ಲಿ ಏಪ್ರಿಲ್ 2011 ರಿಂದ ಮೇ 2015ರ ಅವಧಿಯಲ್ಲಿ 1ನೇ ಎದುರುದಾರರು ನಿರ್ವಹಿಸಿರುವ ಕಾಮಗಾರಿಗಳ ಸಂಬಂಧ ಸಲ್ಲಿಸಿರುವ ಲೆಕ್ಕಪತ್ರಗಳ ವಿಧಾನದಲ್ಲಿ ಹಾಗೂ ಕಾಮಗಾರಿಗಳ ಮುಂಗಡ ಹಣವನ್ನು ಕಾಮಗಾರಿ ನಿರ್ವಹಣೆಗೆ ಬಳಸುವಲ್ಲಿ 1ನೇ ಎದುರುದಾರರು ಕೆ.ಆರ್.ಐ.ಡಿ.ಎಲ್. ನಿಯಮ 41, 42 ಮತ್ತು 177ನ್ನು ಉಲ್ಲಂಘನೆ ಮಾಡಿರುವುದಲ್ಲದೆ, ಕಾಲ್ಪನಿಕ ಹೆಸರಿನಲ್ಲಿ ಸುಳ್ಳು ಲೆಕ್ಕಪತ್ರಗಳನ್ನು ಸಲ್ಲಿಸಿರುತ್ತಾರೆ ಹಾಗೂ ಕೆ.ಆರ್.ಐ.ಡಿ.ಎಲ್. ನಿಯಮ 177ರ ವಿರುದ್ಧವಾಗಿ 1ನೇ ಎದುರುದಾರರು ಮುಂಗಡ ಹಣದ ಶೇಕಡ 93ರಷ್ಟು ಹಣವನ್ನು ನಗದಾಗಿ ಪಾವತಿ ಮಾಡಿದ್ದರೂ ಸಹ ಮೇಲ್ಕಂಡ ಅವಧಿಯಲ್ಲಿ ಸಲ್ಲಿಸಿರುವ ಲೆಕ್ಕಪತ್ರಗಳಲ್ಲಿ ಗ್ರೂಪ್ ಲೀಡರ್ ಮತ್ತು ಪಾರ್ಟಿಗಳ ಸಹಿ ಇರದೆ ಇರುವ ಲೆಕ್ಕಪತ್ರಗಳನ್ನು ಮಾನ್ಯ ಮಾಡಿ 1ನೇ ಎದುರುದಾರರು ಮತ್ತು 2 ರಿಂದ 6ನೇ ಎದುರುದಾರರುಗಳು ಗೋಕಾಕ್ ಉಪವಿಭಾಗದ ಕಾಮಗಾರಿಗಳ ಮುಂಗಡ ಹಣದ ಚೆಕ್‌ಗೆ ಸಹಿಮಾಡುವ ಜಂಟಿ ಅಧಿಕಾರ ಇದ್ದಾಗ್ಯೂ 1ನೇ ಎದುರುದಾರರು ಗೋಕಾಕ್ ಉಪವಿಭಾಗದ ಅಧಿಕೃತ

ಚಾಲ್ತಿ ಖಾತೆಯಿಂದ ಕಾಮಗಾರಿ ಮುಂಗಡ ಹಣವನ್ನು ಅನಧಿಕೃತವಾಗಿ 1ನೇ ಎದುರುದಾರರ ವೈಯುಕ್ತಿಕ ಉಳಿತಾಯ ಖಾತೆ ಸಂ.01/010306ಗೆ ವರ್ಗಾವಣೆ ಮಾಡಿಕೊಳ್ಳಲು ಅನುಮೋದನೆ / ಅವಕಾಶ ನೀಡಿರುತ್ತಾರೆ ಮತ್ತು ಸದರಿ 5 ವರ್ಷಗಳ ಅವಧಿಯಲ್ಲಿ ಕೆಲ ಮಾಹೆಯಲ್ಲಿ ಲೆಕ್ಕಪತ್ರಕ್ಕೆ ವ್ಯತಿರಿಕ್ತವಾಗಿ 1ನೇ ಎದುರುದಾರರು ಅವರ ವೈಯುಕ್ತಿಕ ಉಳಿತಾಯ ಖಾತೆಯಲ್ಲಿ ಹೆಚ್ಚುವರಿ ಉಳಿಸಿಕೊಂಡು ಬಾಕಿ ಮೊತ್ತ ರೂ.1,02,68,365/– ಗಳ ಹಣ ದುರುಪಯೋಗಪಡಿಸಿಕೊಂಡು 1ನೇ ಎದುರುದಾರರು ಕೆ.ಆರ್.ಐ.ಡಿ.ಎಲ್. ನಿಯಮಗಳನ್ನು ಪಾಲಿಸದೆ ಅಕ್ರಮವೆಸಗಿ 2 ರಿಂದ 6ನೇ ಎದುರುದಾರರುಗಳು ಮೇಲ್ಕಂಡ ಎಲ್ಲಾ ನಿಯಮಗಳು ಉಲ್ಲಂಘನೆಯಾದರೂ ಅದನ್ನು ಪ್ರಶ್ನಿಸದೆ, 1ನೇ ಎದುರುದಾರರಿಂದ ಯಾವುದೇ ವಿವರಣೆಯನ್ನು ಪಡೆಯದೆ, ಸೂಕ್ತ ಮೇಲ್ವಿಚಾರಣೆ ವಹಿಸದೆ, 2 ರಿಂದ 6ರ ವರೆಗಿನ ಎದುರುದಾರರುಗಳು ಅಧಿಕಾರ ದುರುಪಯೋಗಪಡಿಸಿಕೊಂಡಿರುವುದು ತನಿಖೆಯಲ್ಲಿ ಕಂಡುಬರುತ್ತದೆ ಎಂದು ಎದುರುದಾರರುಗಳ ವಿರುದ್ಧ ತನಿಖಾಧಿಕಾರಿಯವರು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

iii) ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರುಗಳ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

3. 1 ರಿಂದ 6ನೇ ಎದುರುದಾರರುಗಳು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಎದುರುದಾರರುಗಳು ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗೆಳೆದಿರುತ್ತಾರೆ ಹಾಗೂ 1ನೇ ಎದುರುದಾರರು ಅವರ ಆಕ್ಷೇಪಣೆಯಲ್ಲಿ ಗೋಕಾಕ್ ಉಪವಿಭಾಗದಲ್ಲಿ 2005 ರಿಂದ 2017 ರ ವರೆಗೆ ಸಹಾಯಕ ನಿರ್ದೇಶಕರಾಗಿ (ಸಹಾಯಕ ಕಾರ್ಯಪಾಲಕ ಅಭಿಯಂತರರು) ಅಂತ ಕಾರ್ಯ ನಿರ್ವಹಿಸಿರುವುದಾಗಿ ತಿಳಿಸಿರುತ್ತಾರೆ. ಅಲ್ಲದೆ,–

1) ಉಪವಿಭಾಗಕ್ಕೆ ವಹಿಸಿಕೊಟ್ಟ ಕಾಮಗಾರಿಗಳನ್ನು ನಿರ್ವಹಿಸಲು ಪ್ರತಿ ತಿಂಗಳು ಅವರ ಮೇಲಾಧಿಕಾರಿಗೆ ಇಂಡೆಂಟ್ ಸಲ್ಲಿಸಿ ಇಂಪ್ರೆಸ್ಟ್ ಅನ್ನು ನೇರವಾಗಿ 1ನೇ ಎದುರುದಾರರ ಹೆಸರಿನಲ್ಲಿರುವ ಉಳಿತಾಯ ಖಾತೆಗೆ ಜಮಾ ಮಾಡಲಾಗುತ್ತಿತ್ತು.

2) ಕಾಮಗಾರಿಗಳನ್ನು ನಿರ್ವಹಿಸಿದ ನಂತರ ವಾರದಲ್ಲಿ ಒಂದು ದಿನ ಇಂಪ್ರೆಸ್ಟ್ ಮೊತ್ತವನ್ನು ಉಳಿತಾಯ ಖಾತೆಯಿಂದ ತೆಗೆದು ಕೆಲಸ ಮಾಡಿದ ಗ್ರೂಪ್ ಲೀಡರ್‌ಗಳಿಗೆ ಪಾವತಿ ಮಾಡಲಾಗುತ್ತಿತ್ತು ಹಾಗೂ ಸಾಮಗ್ರಿಗಳನ್ನು ಸರಬರಾಜು ಮಾಡಿದವರಿಗೆ ಚೆಕ್ ಮೂಲಕ ವಿತರಿಸಲಾಗುತ್ತಿತ್ತು.

3) ಪ್ರತಿ ತಿಂಗಳು ಕಾಮಗಾರಿಗಳನ್ನು ನಿರ್ವಹಿಸಲು ತೆಗೆದುಕೊಂಡ ಮೊತ್ತಕ್ಕೆ ಆ ತಿಂಗಳ ಕೊನೆ ಅಥವಾ ಮುಂದಿನ ತಿಂಗಳ ಮೊದಲನೆ ವಾರದಲ್ಲಿ ಉಪವಿಭಾಗದಿಂದ ವಿಭಾಗ ಕಛೇರಿಗೆ ಲೆಕ್ಕ ಪತ್ರಗಳನ್ನು ಸಲ್ಲಿಸಲಾಗುತ್ತದೆ. ಮೂಲ ಪತ್ರದ ಪ್ರತಿಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಕಾರ್ಯಪಾಲಕ ಅಭಿಯಂತರರ ಮೂಲ ರುಜು ಇರುತ್ತದೆ ಅಲ್ಲದೆ ಅದರಲ್ಲಿ ಗ್ರೂಪ್ ಲೀಡರ್‌ಗಳ ರುಜು ಇರುತ್ತದೆ. ಬೇರೆ ಇಲಾಖೆಗಳಿಂದ ವಹಿಸಿದ ಕಾಮಗಾರಿಗಳನ್ನು ಪೂರ್ಣಪ್ರಮಾಣದಲ್ಲಿ ನಿರ್ವಹಿಸಿ ಸಂಬಂಧಪಟ್ಟವರಿಗೆ ಹಸ್ತಾಂತರಿಸಿರುವುದಾಗಿ ತಿಳಿಸಿರುತ್ತಾರೆ.

4) ಗೋಕಾಕ್ ವಿಭಾಗಕ್ಕೆ ಸಂಬಂಧಪಟ್ಟ 2011 ರಿಂದ 2015 ರ ವರೆಗಿನ ಕಾಮಗಾರಿಗಳನ್ನು ಲೋಕಾಯುಕ್ತ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ವೀಕ್ಷಿಸಿ ಛಾಯಾ ಚಿತ್ರಗಳನ್ನು ಮತ್ತು ದಾಖಲೆಗಳನ್ನು ಪಡೆದುಕೊಂಡಿರುತ್ತಾರೆಂದು ತಿಳಿಸುತ್ತಾ ಯಾವುದೇ ಹಣದ ದುರ್ಬಳಕೆ ಮಾಡಿರುವುದಿಲ್ಲ ಮತ್ತು ದುರ್ವರ್ತನೆ ತೋರಿರುವುದಿಲ್ಲ. ಆ ಕಾರಣ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

2ನೇ ಎದುರುದಾರರು ಅವರ ಸಮಜಾಯಿಷಿಯಲ್ಲಿ ದಿ: 01/04/2011 ರಿಂದ 15/11/2011 ರವರೆಗೆ ಕಾರ್ಯಪಾಲಕ ಅಭಿಯಂತರರಾಗಿ ಕಾರ್ಯ ನಿರ್ವಹಿಸಿರುವುದಾಗಿ ಆ ಸಂದರ್ಭದಲ್ಲಿ ಗೋಕಾಕ್ ವಿಭಾಗದ 6 ಕಾಮಗಾರಿಗಳ ಲೆಕ್ಕಪತ್ರಗಳಿಗೆ ಮೇಲುರುಜು ಮಾಡಿರುವುದಾಗಿ ತಿಳಿಸಿರುತ್ತಾರೆ. ಸುತ್ತೋಲೆ ಸಂಖ್ಯೆ: ಕೆಎಲ್‌ಎಸಿ/ಆಡಿಟ್/ಅಕೌಂಟ್/2009–10/ದಿನಾಂಕ 02/05/2009 ರ ಪ್ರಕಾರ ಲೆಕ್ಕಪತ್ರಗಳಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಶೇಕಡಾ 100 ರಷ್ಟು ಜವಾಬ್ದಾರರಾಗಿರುತ್ತಾರೆ. 1ನೇ ಎದುರುದಾರರು ಅನಧಿಕೃತವಾಗಿ ಅವರ ವೈಯಕ್ತಿಕ ಎಸ್. ಬಿ. ಅಕೌಂಟ್ ನಂ. 01/010306 (ಕಾರ್ಪೋರೇಷನ್ ಬ್ಯಾಂಕ್, ಗೋಕಾಕ್) ರಲ್ಲಿ ವ್ಯವಹರಿಸಿದ್ದಕ್ಕೆ ನಾವು ಜವಾಬ್ದಾರರಲ್ಲವೆಂದು ತಿಳಿಸಿರುತ್ತಾರೆ. ದಿ: 30/05/2020 ರಂದು ವಯೋನಿವೃತ್ತಿ ಹೊಂದಿರುವುದರಿಂದ ಪ್ರಕರಣ ಮುಕ್ತಾಯಗೊಳಿಸಲು ಕೋರಿರುತ್ತಾರೆ ಹಾಗೂ ಶ್ರೀ ಎಸ್ ವೈ ಕುಂಬಾರ, ನಿವೃತ್ತ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು ಬೆಂಗಳೂರುರವರು ಇಲಾಖಾ

ವಿಚಾರಣೆ ಸಂಖ್ಯೆ: ಕೆ.ಆರ್.ಐ.ಡಿ.ಎಲ್/ಆಡಳಿತ/ಸಿಆರ್/ಬಾಗಲಕೋಟೆ/2018–19 (ಇವಿ) 466, ದಿ: 17/04/2018ರ ಪ್ರತಿಯನ್ನು ಸಲ್ಲಿಸುತ್ತಾ ಸಹಾಯಕ ಕಾರ್ಯಪಾಲಕ ಅಭಿಯಂತರರು ನೇರವಾಗಿ ಕಾಮಗಾರಿ ನಿರ್ವಹಿಸುವಾಗ ಕಾಮಗಾರಿ ನಿರ್ವಹಣೆ ಪಡೆದ ಮುಂಗಡ ಹಣಕ್ಕೆ ಕಾಮಗಾರಿ ನಿರ್ವಹಿಸಿದ ಲೆಕ್ಕಪತ್ರಕ್ಕೆ ಸಂಪೂರ್ಣ ಜವಾಬ್ದಾರರು ಮತ್ತು ಕಾರ್ಯಪಾಲಕ ಅಭಿಯಂತರರು ಮೇಲುಸ್ತುವಾರಿ ಅಧಿಕಾರ ಹೊಂದಿರುತ್ತಾರೆಂದು ತಿಳಿಸಿರುತ್ತಾರೆ.

3ನೇ ಎದುರುದಾರರು ಅವರ ಸಮಜಾಯಿಷಿಯಲ್ಲಿ ಗೋಕಾಕ್ ವಿಭಾಗದಲ್ಲಿ ದಿ: 16/11/2011 ರಿಂದ 27/06/2012 ರ ವರೆಗೆ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿದ್ದಾಗಿ ಮತ್ತು ಏಪ್ರಿಲ್ 2015ರಲ್ಲಿ ನಿವೃತ್ತಿ ಹೊಂದಿರುವುದಾಗಿ ತಿಳಿಸುವುದಲ್ಲದೆ 2ನೇ ಎದುರುದಾರರು ಸಲ್ಲಿಸಿದ ಆಕ್ಷೇಪಣೆಗಳನ್ನು ಪುನರುಚ್ಚರಿಸುತ್ತಾ ಈ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

4ನೇ ಎದುರುದಾರರು ಅವರ ಸಮಜಾಯಿಷಿಯಲ್ಲಿ ಗೋಕಾಕ್ ವಿಭಾಗದಲ್ಲಿ ದಿ: 30/1/2013 ರಿಂದ 01/08/2013 ರ ವರೆಗೆ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿದ್ದಾಗಿ ಆ ಸಂದರ್ಭದಲ್ಲಿ ಗೋಕಾಕ್ ಉಪವಿಭಾಗದ 23 ಕಾಮಗಾರಿಗಳ ಲೆಕ್ಕಪತ್ರಗಳಿಗೆ ಮೇಲು ರುಜು ಮಾಡಿರುತ್ತೇನೆಂದು ತಿಳಿಸುತ್ತಾ 2 ಮತ್ತು 3ನೇ ಎದುರುದಾರರು ಸಲ್ಲಿಸಿದ ಆಕ್ಷೇಪಣೆಗಳನ್ನು ಪುನರುಚ್ಚರಿಸುತ್ತಾರೆ. ದಿ: 31/5/2020 ರಂದು ವಯೋನಿವೃತ್ತಿ ಹೊಂದಿರುವುದರಿಂದ ಈ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

5 ನೇ ಎದುರುದಾರರು ಅವರ ಸಮಜಾಯಿಷಿಯಲ್ಲಿ ಗೋಕಾಕ್ ವಿಭಾಗದಲ್ಲಿ ದಿ: 01/08/2013 ರಿಂದ 05/11/2014ರ ವರೆಗೆ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿದ್ದಾಗಿ ಆ ಸಂದರ್ಭದಲ್ಲಿ ಗೋಕಾಕ್ ಉಪವಿಭಾಗದ ಕಾಮಗಾರಿಗಳ ಲೆಕ್ಕಪತ್ರಗಳಿಗೆ ಮೇಲು ರುಜು ಮಾಡಿರುತ್ತೇನೆಂದು ತಿಳಿಸುತ್ತಾ 2, 3 ಮತ್ತು 4ನೇ ಎದುರುದಾರರು ಸಲ್ಲಿಸಿದ ಆಕ್ಷೇಪಣೆಗಳನ್ನು ಪುನರುಚ್ಚರಿಸುತ್ತಾರೆ. ದಿ: 31/05/2022 ರಂದು ವಯೋನಿವೃತ್ತಿ ಹೊಂದಿರುವುದರಿಂದ ಈ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

6ನೇ ಎದುರುದಾರರು ಅವರ ಸಮಜಾಯಿಷಿಯಲ್ಲಿ ಗೋಕಾಕ್ ವಿಭಾಗದಲ್ಲಿ ದಿ: 06/11/2014 ರಿಂದ 31/05/2015ರ ವರೆಗೆ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿದ್ದಾಗಿ ಆ ಸಂದರ್ಭದಲ್ಲಿ ಗೋಕಾಕ್ ಉಪವಿಭಾಗದ

ಕಾಮಗಾರಿಗಳ ಲೆಕ್ಕಪತ್ರಗಳಿಗೆ ಮೇಲು ರುಜು ಮಾಡಿರುತ್ತೇನೆಂದು ತಿಳಿಸುತ್ತಾ 2, 3, 4 ಮತ್ತು 5ನೇ ಎದುರುದಾರರು ಸಲ್ಲಿಸಿದ ಆಕ್ಷೇಪಣೆಗಳನ್ನು ಪುನರುಚ್ಚರಿಸುತ್ತಾರೆ. ದಿ: 31/7/2017 ರಂದು ವಯೋನಿವೃತ್ತಿ ಹೊಂದಿರುವುದರಿಂದ ಈ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ತನಿಖಾಧಿಕಾರಿಯವರು ವಶಪಡಿಸಿಕೊಂಡ ದಾಖಲಾತಿಗಳಿಂದ 1 ರಿಂದ 6ನೇ ಎದುರುದಾರರು ಕಾಮಗಾರಿಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಸಂಸ್ಥೆಯ ನಿಯಮಾವಳಿ ಕೆ.ಆರ್.ಐ.ಡಿ.ಎಲ್ ಸ್ಟ್ಯಾಂಡಿಂಗ್ ಆರ್ಡರ್ 1978 ರ ನಿಯಮ 177, ನಿಯಮ-41, 42 ಮತ್ತು ಕೂಲಿ ದರ ಕಾಯ್ದೆ 1948 ರ ಕಲಂ 18 ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ ಮತ್ತು 2 ರಿಂದ 6ನೇ ಎದುರುದಾರರುಗಳ ಆಕ್ಷೇಪಣೆಯಲ್ಲಿ ಸುತ್ತೋಲೆ ಸಂ: ಕೆಎಲ್‌ಎಸಿ/ಆಡಿಟ್/ಅಕೌಂಟ್/2009-10, ದಿ: 02/05/2009ರ ಪ್ರಕಾರ ಕಾಮಗಾರಿಯ ಲೆಕ್ಕಪತ್ರಗಳಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಶೇಕಡಾ 100% ಜವಾಬ್ದಾರಾಗಿರುತ್ತಾರೆಂದು ತಿಳಿಸಿರುತ್ತಾರೆ. ಅಲ್ಲದೆ, 2015 ಕ್ಕಿಂತ ಪೂರ್ವದಲ್ಲಿ ಕಾಮಗಾರಿಗೆ ನೀಡಿದ ಅನುದಾನವನ್ನು 1ನೇ ಎದುರುದಾರರು ಅವರ ವೈಯುಕ್ತಿಕ ಉಳಿತಾಯ ಖಾತೆಗೆ ವರ್ಗಾಯಿಸಿ ವ್ಯವಹರಿಸಿದ್ದು ಮತ್ತು 2 ರಿಂದ 6ನೇ ಎದುರುದಾರರುಗಳು ಕಾಮಗಾರಿಗಳ ಲೆಕ್ಕಪತ್ರಗಳಿಗೆ ಮೇಲುರುಜು ಮಾಡಿರುವುದರಿಂದ ಎದುರುದಾರರುಗಳು ಸಲ್ಲಿಸಿದ ಆಕ್ಷೇಪಣೆಯ ಅಂಶಗಳು ಎದುರುದಾರರುಗಳ ವಿರುದ್ಧ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲಾತಿಗಳು ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರುಗಳು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಎದುರುದಾರರುಗಳ ವಿರುದ್ಧ ನಡಾವಳಿಯನ್ನು ಕೈ ಬಿಡಲು ಸೂಕ್ತ, ಸಮಂಜಸ, ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಆದರೆ ಈ ಪ್ರಕರಣದಲ್ಲಿ 2ನೇ ಎದುರುದಾರರಾದ ಆರ್. ಎಸ್. ಹುಡೇದವರ್, ಕಾರ್ಯಪಾಲಕ ಅಭಿಯಂತರರು ದಿ:31/05/2020 ರಂದು ವಯೋನಿವೃತ್ತಿ ಹೊಂದಿರುತ್ತಾರೆ. 3ನೇ ಎದುರುದಾರರಾದ ಶ್ರೀ. ಟಿ.ಹೆಚ್. ಗುರುಮೂರ್ತಿ, ಕಾರ್ಯಪಾಲಕ ಅಭಿಯಂತರರು

ದಿ:30/04/2015 ರಂದು ವಯೋನಿವೃತ್ತಿ ಹೊಂದಿರುತ್ತಾರೆ. 4ನೇ ಎದುರುದಾರರಾದ ಶ್ರೀ. ಎಂ.ಎಸ್. ತೀರ್ಥಲಿಂಗಪ್ಪ ಕಾರ್ಯಪಾಲಕ ಅಭಿಯಂತರರು ದಿ:31/05/2020 ರಂದು ವಯೋನಿವೃತ್ತಿ ಹೊಂದಿರುತ್ತಾರೆ. 5ನೇ ಎದುರುದಾರರಾದ ಶ್ರೀ. ಎಲ್. ಧನ್ಯಕುಮಾರ್ ಕಾರ್ಯಪಾಲಕ ಅಭಿಯಂತರರು ದಿ:31/05/2022 ರಂದು ವಯೋನಿವೃತ್ತಿ ಹೊಂದಿರುತ್ತಾರೆ ಮತ್ತು 6ನೇ ಎದುರುದಾರರಾದ ಶ್ರೀ. ನೂರ್ ಅಹಮದ್ ಕಾರ್ಯಪಾಲಕ ಅಭಿಯಂತರರು ದಿ:31/07/2017 ರಂದು ವಯೋನಿವೃತ್ತಿ ಹೊಂದಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ಏಪ್ರಿಲ್ 2011 ರಿಂದ ಜೂನ್ 2015ರ ವರೆಗಿನ ಕೆ. ಆರ್. ಐ. ಡಿ. ಎಲ್. ಕಾಮಗಾರಿಗಳ ಲೆಕ್ಕಪತ್ರಗಳಲ್ಲಿ ನಿಯಮಗಳನ್ನು ಪಾಲಿಸದೆ ಕರ್ತವ್ಯಲೋಪ / ದುರ್ನಡತೆ ಎಸಗುವ ಮೂಲಕ ಎದುರುದಾರರುಗಳು ಅವರ ಅಧಿಕಾರ ದುರುಪಯೋಗಪಡಿಸಿಕೊಂಡು ಸರ್ಕಾರದ ಹಣ ದುರುಪಯೋಗವಾಗಿರುವುದು ಸ್ಪಷ್ಟವಾಗಿರುತ್ತದೆ. ಪ್ರಸ್ತುತ ಪ್ರಕರಣದ ಘಟನೆ ನಡೆದು 7 ವರ್ಷಗಳಿಗಿಂತ ಹೆಚ್ಚಾಗಿರುವುದರಿಂದ ಮತ್ತು 2 ರಿಂದ 6ನೇ ಎದುರುದಾರರುಗಳು ವಯೋನಿವೃತ್ತಿ ಹೊಂದಿರುವುದರಿಂದ ಕ.ನಾ.ಸೇ (ನಡತೆ) ನಿಯಮಗಳು, 1958 ರ ನಿಯಮ 214(2)(b)(ii)ರನ್ವಯ ಇಲಾಖಾ ವಿಚಾರಣೆಗೆ ಅವಕಾಶವಿರುವುದಿಲ್ಲ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ನಂ.1552/2021 (ಕರ್ನಾಟಕ ಲೋಕಾಯುಕ್ತ ಹಾಗೂ ಮತ್ತೊಬ್ಬರು – ವಿರುದ್ಧ – ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಕೃಷಿ ಇಲಾಖೆ, ಬೆಂಗಳೂರು ಮತ್ತು ಶ್ರೀ. ಎಸ್. ಬಿ. ಬಿರಾದಾರ) ಪ್ರಕರಣದಲ್ಲಿ ದಿ: 07/07/2021 ರಂದು ಆದೇಶ ನೀಡಿದ್ದು, ಅದರಲ್ಲಿ ಸರ್ಕಾರಿ ನೌಕರರ ವಿರುದ್ಧ ಸೇವೆಯಲ್ಲಿದ್ದಾಗ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸದಿದ್ದಲ್ಲಿ ಘಟನೆ ನಡೆದು ನಾಲ್ಕು ವರ್ಷಗಳ ತರುವಾಯ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲವಾಗಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು, 1958ರ ನಿಯಮ 214(2)(b)(ii)ರನ್ವಯ ಇಲಾಖಾ ವಿಚಾರಣೆ ನಡೆಸಲು ಅವಕಾಶವಿರುವುದಿಲ್ಲವೆಂದು ಉಲ್ಲೇಖಿಸಿದೆ. ಆದಾಗ್ಯೂ ಅದೇ ತೀರ್ಪಿನ ಪ್ಯಾರಾ-4ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಸರ್ಕಾರಕ್ಕೆ ಮೇಲ್ಕಂಡ ಎದುರುದಾರರುಗಳಿಂದ ಆರ್ಥಿಕ ನಷ್ಟವುಂಟಾಗಿದ್ದಲ್ಲಿ ಅಂತಹ ಆರ್ಥಿಕ ನಷ್ಟವನ್ನು ಸರ್ಕಾರವೇ ಕಾನೂನಿನಡಿಯಲ್ಲಿ ಎದುರುದಾರರುಗಳ ವಿರುದ್ಧ ಕ್ರಮ ಜರುಗಿಸಿ ವಸೂಲಿ ಮಾಡಬಹುದೆಂದು ಉಲ್ಲೇಖಿಸಿರುತ್ತದೆ. ಆ ಕಾರಣ, ಸರ್ಕಾರವೇ ಎದುರುದಾರರುಗಳ ವಿರುದ್ಧ ಆರ್ಥಿಕ ನಷ್ಟವುಂಟಾದ ಬಗ್ಗೆ ಕ್ರಮ ಕೈಗೊಳ್ಳಬಹುದಾಗಿರುತ್ತದೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6. ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 2 (12) ರ ಪ್ರಕಾರ 1 ನೇ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ಅವರ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಕರ್ತವ್ಯಲೋಪವೆಸಗಿ ಸರ್ಕಾರಿ / ಸಾರ್ವಜನಿಕ ನೌಕರರಾಗಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966, ನಿಯಮ 3(1) (i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ 3(1) (i) ರಿಂದ (iv)) ರನ್ವಯ ಕರ್ತವ್ಯಲೋಪ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

7. 1ನೇ ಎದುರುದಾರರಾದ ಶ್ರೀ. **ಜೆಡ್.ಎಂ. ಚಿಂಚೋಳ್‌ಕರ್,** ಕೆ.ಆರ್.ಐ.ಡಿ.ಎಲ್. ಗೋಕಾಕ್ ಉಪವಿಭಾಗ, ಸಹಾಯಕ ಕಾರ್ಯಪಾಲಕ ಅಭಿಯಂತರರು, (ನಿವೃತ್ತಿ ದಿ: 31/07/2026)ರವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

29/11/22

**(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)**
ಉಪಲೋಕಾಯುಕ್ತರು-01,
ಕರ್ನಾಟಕ ರಾಜ್ಯ, ಬೆಂಗಳೂರು.